**ಸಾಕ್ಷಿಯನ್ನು ದಿಃ24.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಿಡಿ-3 ರ ಹಕ್ಕುಪತ್ರ ನಿಮ್ಮದಲ್ಲ ಎಂದರೆ ಸರಿ, ನಾರಾಯಣರವರದ್ದು. ಅದು ನಿಮಗೆ ಹೇಗೆ ಸಿಕ್ಕಿತು ಎಂದರೆ, ಅವರ ಬಳಿ ಪಡೆದುಕೊಂಡು ಬಂದಿರುತ್ತೇವೆ.
2. ನೀವು ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸದರಿ ವಿಚಾರ ಹೇಳಿದ್ದೀರಾ ಎಂದರೆ, ಹೇಳಿದ್ದೇವೆ. ಸದರಿ ವಿಚಾರ ಹೇಳಿಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
3. ನಿಡಿ-3 ರ ದಾಖಲೆ ಬೋರೆ ಹೊಸಹಳ್ಳಿ ಗ್ರಾಮಕ್ಕೆ ಸಂಬಂಧಿಸಿದ್ದು.
4. ನಾನು ಯಾವುದೇ ವಿದ್ಯಾಭ್ಯಾಸ ಮಾಡಿಲ್ಲ.
5. ನಿಡಿ-3 ರಲ್ಲಿ ಗ್ರಾಮದ ಹೆಸರನ್ನು ತಿದ್ದುಪಡಿ ಮಾಡಿ ಬರೆಯಲಾಗಿದೆ ಎಂದರೆ ಸರಿಯಲ್ಲ.

6. ನಿಡಿ-3 ನ್ನು ನೀವು ಬೇರೆಯವರ ದಾಖಲೆಯನ್ನು ಕಳ್ಳತನ ಮಾಡಿಕೊಂಡು ಬಂದಿದ್ದೀರಾ ಎಂದರೆ ಸರಿಯಲ್ಲ.

7. ನೀವು ನಿಡಿ - 3 ನ್ನು ಹಾಜರುಪಡಿಸಿದ ರೀತಿ ಕಾನೂನುಬದ್ಧವಾಗಿಲ್ಲ ಎಂದರೆ ಸರಿಯಲ್ಲ.

8. ನಿಡಿ-3 ರ ದಾಖಲೆಯ ಮಾಲೀಕರನ್ನು ಕರೆದುಕೊಂಡು ಬಂದು ವಿಚಾರಣೆ ಮಾಡಿಸಲು ತೊಂದರೆ ಇರುವುದಿಲ್ಲ.

9. ನಿಡಿ-3 ರ ಪ್ರತಿಯಲ್ಲಿ ಗ್ರಾಮದ ಹೆಸರು ಇರುವುದಿಲ್ಲ ಎಂದರೆ, ಸರಿಯಲ್ಲ.

10. ವಾದಿಯ ಆಸ್ತಿಯನ್ನು ಲಪಟಾಯಿಸಲು ಬೇರೆಯವರಿಗೆ ಸೇರಿದ ಈ ದಾವೆಗೆ ಸಂಬಂಧಿಸಿದ ದಾಖಲೆಯನ್ನು ಕದ್ದುಕೊಂಡು ಬಂದು ಹಾಜರುಪಡಿಸಿದ್ದೀರಾ ಎಂದರೆ ಸರಿಯಲ್ಲ.

11. ನಿಮ್ಮ ಊರಿನಲ್ಲಿ ಎಷ್ಟು ವಾರ್ಡ್ ಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಊರಿನಲ್ಲಿ ಒಂದೇ ವಾರ್ಡ್ ಇದೆ ಎಂದರೆ ನನಗೆ ಗೊತ್ತಿಲ್ಲ.

12. ನಿಡಿ - 3 ರಲ್ಲಿ ನಿಮ್ಮ ಊರಿನಲ್ಲಿ 73 ವಾರ್ಡ್ ಗಳು ಇವೆ ಎಂದು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ.

13. ಬೋರೆ ಹೊಸಹಳ್ಳಿಯಲ್ಲಿ 73 ವಾರ್ಡ್ ಗಳು ಇಲ್ಲ ಒಂದೇ ವಾರ್ಡ್ ಎಂದರೆ ನನಗೆ ಗೊತ್ತಿಲ್ಲ.

14. ನಿಡಿ - 3 ರ ದಾಖಲೆಯನ್ನು ಸಾಬೀತುಪಡಿಸಲು ಇಒ ಅಥವಾ ಪಿಡಿಒ ರವರನ್ನು ಸಾಕ್ಷಿ ಮಾಡಿಸಲು ತೊಂದರೆ ಇಲ್ಲ ಎಂದರೆ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ.

15. ನಿಡಿ-3 ರ ಸ್ವತ್ತಿನ ಆಜುಬಾಜುದಾರರನ್ನು ಕರೆದುಕೊಂಡು ಬಂದು ಸಾಕ್ಷಿ ಹೇಳಿಸಲು ತೊಂದರೆ ಇಲ್ಲ ಎಂದರೆ, ಸರಿ.

16. ನಿಡಿ-3 ರ ದಾಖಲೆಗೆ ಹಾಗೂ ಈ ದಾವೆಗೆ ಸಂಬಂಧ ಇಲ್ಲ ಎಂದರೆ, ಸಂಬಂಧಪಟ್ಟಿರುವ ದಾಖಲೆ ಎಂದು ನುಡಿಯುತ್ತಾರೆ.

17. ನಿಡಿ - 3 ನ್ನು ಯಾರೂ ತಿದ್ದುಪಡಿ ಮಾಡಿಲ್ಲ. ತಿದ್ದುಪಡಿ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

18. ನಿಡಿ-3 ನ್ನು ಈ ದಾವೆಗಾಗಿ ಸೃಷ್ಠಿ ಮಾಡಿಕೊಂಡ ದಾಖಲೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ